# ಪರಿಹಾರ

■ ನರಸಿಂಹಾರೆಡ್ಡಿ ಯಂಕಮೊಳ, ಸೇಡಂ

ಮಹಾರಾಜ ಚಂದ್ರಸೇನರ ಆಸ್ಥಾನದ ಚಿತ್ರಕಲಾವಿದ ಬ್ರಹ್ಮದತ್ತ. ತನ್ನ ಚಿತ್ರಕಲೆಯಿಂದ ರಾಜ್ಯದಲ್ಲಿನ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸಿದ. ಹಾಗಾಗಿ ಬ್ರಹ್ಮದತ್ತನನ್ನು ಆಸ್ಥಾನ ಕಲಾವಿದನನ್ನಾಗಿ ಮಹಾರಾಜರು ನೇಮಿಸಿಕೊಂಡಿದ್ದರು. ಹೀಗಿರುವಾಗ ಪಕ್ಕದ ರಾಜ್ಯದ ಸೂರ್ಯಸೇನನಿಗೂ ಮಹಾರಾಜ ಚಂದ್ರಸೇನನಿಗೂ ಗಡಿಯ ವಿಷಯದಲ್ಲಿ ಭಿನ್ನಾಭಿಪ್ರಾಯ ಶುರುವಾಯಿತು. ಅದು ಕೊನೆಗೆ ಯುದ್ಧ ಸಾರುವುದಕ್ಕೆ ನಾಂದಿಯಾಯಿತು.

ಚಂದ್ರಸೇನನ ಸೈನ್ಯ ಚಿಕ್ಕದಾಗಿದ್ದರಿಂದ ಸೋಲೊಪ್ಪಿಕೊಳ್ಳುವ ಸನ್ನಿವೇಶವೂ ಬಂದೊದಗಿತ್ತು. ಬ್ರಹ್ಮದತ್ತನು ಹೇಗಾದರೂ ಮಾಡಿ ಈ ಯುದ್ಧವನ್ನು ನಿಲ್ಲಿಸಬೇಕೆಂದುಕೊಂಡನು. ಕೊನೆಯ ದಿನದ ಯುದ್ಧ ಬಾಕಿಯಿರುವಾಗ ಬ್ರಹ್ಮದತ್ತನು ಒಂದು ಚಿತ್ರವನ್ನು ಬಿಡಿಸಿದನು. ಮರುದಿನ ಮಹಾರಾಜರು ಯುದ್ಧಕ್ಕೆ ಹೊರಡುವಾಗ ಆ ಚಿತ್ರದ ಪಟವನ್ನು ಕೊಟ್ಟು, ಯುದ್ಧಕ್ಕೆ ಮುಂಚೆ ಈ ಪಟವನ್ನು ಸೂರ್ಯಸೇನ ಮಹಾರಾಜರಿಗೆ ನೀಡಿ ಎಂದು ಹೇಳಿದನು. ಚಂದ್ರಸೇನನು ಹಾಗೆಯೇ ಮಾಡಿದನು.

ಆ ಪಟವನ್ನು ನೋಡಿದ ತಕ್ಷಣ ಸೂರ್ಯಸೇನ ಮಹಾರಾಜರು ಯುದ್ಧ ನಿಲ್ಲಿಸುವಂತೆ ಆದೇಶ ನೀಡಿದರು. ಯುದ್ಧ ನಿಂತ ಸಲುವಾಗಿ ಚಂದ್ರಸೇನ ಮಹಾರಾಜರಿಗೆ ಸಂತೋಷವಾಯಿತು. ಇಬ್ಬರೂ ರಾಜರ ನಡುವೆ ಯುದ್ಧ ನಡೆಯದೇ ರಾಜೀಯಾಯಿತು.

ಅರಮನೆಗೆ ಮರಳಿ ಬ್ರಹ್ಮದತ್ತನಿಗೆ ಚಂದ್ರಸೇನನು ಕೇಳಿದನು. ಆ ಚಿತ್ರಪಟದಲ್ಲಿ ಅಂತಹದು ಏನಿತ್ತು? ಸೂರ್ಯಸೇನನು ಯುದ್ಧವನ್ನೇ ನಿಲ್ಲಿಸಿದನು ಎಂದು ಕೇಳಿದನು. ಆ ಚಿತ್ರಪಟದಂತೆಯೇ ಇರುವ ಇನ್ನೊಂದು ಚಿತ್ರಪಟವನ್ನು ಮಹಾರಾಜರಿಗೆ ತೋರಿಸಿದ ಬ್ರಹ್ಮದತ್ತ. ಆ ಚಿತ್ರಪಟದಲ್ಲಿ ಒಂದು ಕಡೆ ಸೂರ್ಯ, ಇನ್ನೊಂದು ಕಡೆ ಚಂದ್ರ, ಮಧ್ಯದಲ್ಲಿ ಒಂದು ದೇವಸ್ಥಾನ ಇದೆ ಮಹಾರಾಜ. ಇದರ ಅರ್ಥ ಏನೆಂದರೆ, ಈ ಎರಡು ರಾಜ್ಯಗಳ ಗಡಿಯ ಮಧ್ಯದಲ್ಲಿ ದೇವಸ್ಥಾನ ಬರುತ್ತದೆ. ಎರಡು ರಾಜ್ಯದ ದೊರೆಗಳು ಅದರ ಅಭಿವೃದ್ಧಿಗೆ ಕಾಣಿಕೆಯನ್ನು ನೀಡಿದ್ದೀರಿ. ಅಲ್ಲಿನ ದೇವರೇ ನಿಮ್ಮ ರಾಜ್ಯಗಳ ಮನೆದೇವರು ಕೂಡ. ಹಿಂದೊಮ್ಮೆ ನಾನು ಆ ದೇವಸ್ಥಾನದ ಉತ್ಸವದ ಸಮಯದಲ್ಲಿ ಭೇಟಿಕೊಟ್ಟಾಗ, ಸೂರ್ಯಸೇನ ಮಹಾರಾಜರೂ ಅಲ್ಲಿಗೆ ಬಂದಿದ್ದರು. ಅಲ್ಲಿನ ಪ್ರಧಾನ ಅರ್ಚಕರು ದೇವಸ್ಥಾನಕ್ಕೆ ಸುಮಾರು ಸಾವಿರ ವರ್ಷಗಳ ಇತಿಹಾಸವಿದೆ ಎಂದು ಹೇಳಿದರು. ಉಭಯ ರಾಜ್ಯಗಳ ದೊರೆಗಳೇ ಇದನ್ನು ಕಟ್ಟಿಸಿದ್ದಾರೆ. ಎರಡೂ ರಾಜ್ಯಗಳು ಒಂದಾಗಿದ್ದರೆ ಮಾತ್ರ ಈ ದೇವಸ್ಥಾನ ಉಳಿಯುವುದು. ಒಂದು ವೇಳೆ ಹಾಗಾಗದೇ ಈ ರಾಜ್ಯಗಳ ಮಧ್ಯೆ ಯುದ್ಧವಾದರೆ ಈ ದೇವಸ್ಥಾನ ಉಳಿಯದು ಎಂದು ಹೇಳಿದ್ದರು. ಈ ಚಿತ್ರ ಅದನ್ನೇ ಧ್ವನಿಸುತ್ತದೆ.

ನಿಮ್ಮ ನಿಮ್ಮಲ್ಲೇ ಯುದ್ಧಗಳಾದರೆ ಬೇರೆಯವರಿಗೆ ಅವಕಾಶ ನೀಡಿದಂತಾಗುತ್ತದೆ. ಈ ದೇವಸ್ಥಾನ ಪರಕೀಯರ ಪಾಲಾದರೇ ಈ ರಾಜ್ಯಗಳೇ ಉಳಿಯುವದಿಲ್ಲ ಎಂಬ ಎಚ್ಚರಿಕೆಯನ್ನೂ ನೀಡಿದ್ದರು. ನೀವಿಬ್ಬರೂ ಸೂರ್ಯ ಚಂದಿರರ ಹಾಗೆ ಈ ದೇವಸ್ಥಾನಕ್ಕೆ ಕಾವಲಿರಬೇಕೆಂದು ಹೇಳಿದ್ದರು. ಆಗ ಅವರ ಮಾತಿಗೆ ಒಪ್ಪಿದ ಸೂರ್ಯಸೇನ ಮಹಾರಾಜರು. ಕಾಲಕ್ರಮೇಣ ಅದನ್ನು ಮರೆತು ಬಿಟ್ಟಿದ್ದರು.

ಆ ಮಾತನ್ನು ಮತ್ತೆ ನಾನು ನೆನಪಿಸಿದೆ. ನಾನು ಬಿಡಿಸಿದ ಚಿತ್ರಪಟದಲ್ಲಿನ ಸೂರ್ಯಚಂದ್ರರು ಸೂರ್ಯಸೇನ ಮಹಾರಾಜರು ಮತ್ತು ಚಂದ್ರಸೇನ ಮಹಾರಾಜರಾದ ನಿಮ್ಮನ್ನು ಸೂಚಿಸುತ್ತದೆ. ಈ ವಿಷಯವೇ ನೆನಪಾಗಿ ಚಿತ್ರಪಟಗಳನ್ನು ಬಿಡಿಸಿದೆ. ಇದು ನಿಮಗೆ ಎಂದು ಆ ಚಿತ್ರಪಟದ ಪ್ರತಿಯನ್ನು ಮಹಾರಾಜರಿಗೆ ನೀಡಿದನು. ಬ್ರಹ್ಮದತ್ತನ ಸಮಯಪ್ರಜ್ಞೆ ಮತ್ತು ಚಾಣಾಕ್ಷತನವನ್ನು ಮಹಾರಾಜರು ಕೊಂಡಾಡಿದರು. ಅಂದಿನಿಂದ ಮತ್ತೆ ಆ ಎರಡು ರಾಜ್ಯಗಳ ಮಧ್ಯ ಎಂದೂ ಯುದ್ಧವಾಗಲಿಲ್ಲ. ■

